OS No. 33/2019

PW-1

**(ಇಂದು ದಿಃ 12-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

ಮದ್ಯಂತರ ಅರ್ಜಿ ಆದೇಶದ ಮೇರೆಗೆ **<u>ಪಾಟೀ ಸವಾಲುಃ- 2ನೇ ಪ್ರತಿವಾದಿ ಪರ ಶ್ರೀ.BSR ವಕೀಲರಿಂದಃ-</u>**

ನನ್ನ ತಂದೆಗೆ 4 ಜನ ಗಂಡು ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು . ಹೆಣ್ಣು ಮಕ್ಕಳ ಹೆಸರು ಸಂಗೀತ ಮತ್ತು ಮಹಾದೇವಿ. ಇಬ್ಬರು ಹೆಣ್ಣು ಮಕ್ಕಳು ಬದುಕಿದ್ದಾರೆ. ನನ್ನ ಸಹೋದರಿಯರನನ್ನು ಈ ದಾವೆಯಿಲ್ಲಿ ಪಾರ್ಟಿ ಮಾಡಿಲ್ಲ. ನಾನು ITI ಯವರೆಗೆ ಓದಿದ್ದೇನೆ. 1ನೇ ಪ್ರತಿವಾದಿ ಪದವಿಧರ. 2ನೇ ಪ್ರತಿವಾದಿ 2ನೇ ತರಗತಿಯವರೆಗೆ ಓದಿದ್ದಾರೆ ಎಂದರೆ ಸರಿ. ನನ್ನ ತಂದೆ ಬದುಕಿದ್ದಾಗ GESCOM ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸದರಿ ಸಂಬಂಳದಿಂದ ನಮ್ಮನ್ನು ಸಾಕಿ ಬೆಳಸಿ ಓದಿಸಿದ್ದಾರೆ ಎಂದರೆ ಸರಿ. ನನ್ನ ತಂದೆ ಅವರ ಸಂಬಳದ ಹಣದಿಂದ ಒಂದು ಪ್ಲಾಟನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ನನ್ನ ತಂದೆಗೆ ಸಂಬಳ ಹೊರತು ಪಡಿಸಿ ಬೇರೆ ಅದಾಯದ ಮೂಲ ಇರಲಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಸಂಗಿತಾರವರ ಮದುವೆಗಳನ್ನು ನನ್ನ ತಂದೆ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುದುವರೆದು ನನ್ನ ತಂದೆ 1 ಮುತ್ತ 2 ನೇ ಪ್ರತಿವಾದಿಯರ ಮತ್ತು ಸಂಗೀತಾನ ಮದುವೆ ಮಾಡಿದ್ದಾರೆ . 2ನೇ ಪ್ರತಿವಾದಿಗೆ 16 ವರ್ಷ ಆದಾಗ ಆತ ದುಡಿಯಲು ಬಸವಕಲ್ಯಾಣಕ್ಕೆ ಹೋಗಿದ್ದರು ಎಂದರೆ ಮನೆ ಬಿಟ್ಟು ಹೋಗಿದ್ದರು ಎಂದು ಹೇಳುತ್ತಾರೆ. ಅಲ್ಲಿ ಲಾರಿ ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಲಾರಿ ಕ್ಲೀನರ್ ಆಗಿ ಕೆಲಸ ಮಾಡುತ್ತಾ ಲಾರಿ ಚಾಲನೆ ಮಾಡಲು ಕಲೆತು ನಂತರ ಚಾಲಕನಾಗಿ ಸಂಪಾದನೆ ಮಾಡಿ ಸ್ವಂತಕ್ಕೆ ಲಾರಿ ಕೊಂಡುಕೊಂಡಿದ್ದರು ಎಂದರೆ ಸರಿಯಲ್ಲ. ಲಾರಿಯಿಂದ ಬಂದ ಆಧಾಯ ದಿಂದ 2ನೇ ಪ್ರತಿವಾದಿ ದಾವಾ ಐಟೆಮ್ ನಂಬರ 3 ರನ್ನು ಕೊಂಡುಕೊಂಡರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನನ್ನು ನನ್ನ ತಂದೆ ಖರೀದಿ ಮಾಡಿದ್ದಾರೆ ಎಜಂದು ಹೇಳುತ್ತಾರೆ. ಖರೀದಿ ಪತ್ರ 2ನೇ ಪ್ರತಿವಾದಿ ಹೆಸರಿಗೆ ಆಗಿದೆ. ಸದರಿ ಜಮೀನನ್ನು ನನ್ನ ತಂದೆ ಅವರ ಆದಾಯದಿಂದ 2ನೇ ಪ್ರತಿವಾದಿ ಹೆಸರಲ್ಲಿ ಖರೀದಿ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರ ಆದಾಗ ನಾವು 4 ಜನ ಸಹೋದರರು ವಯಸ್ಕರು ಆಗಿದ್ದೇವು ಎಂದರೆ ಸರಿ. ಒಂದು ವೇಳೆ ನನ್ನ ತಂದದೆ ಜಮೀನು

ಖರೀದಿ ಮಾಡಿದ್ದರೆ 4 ಜನ ಮಕ್ಕಳ ಹಸರಲ್ಲಿ ಖರೀಲ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವ ಐಟೆಮ್ ನಂಬರ 3 ಒಟ್ಟು ಕುಟುಂಬದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ತೀರಿ ಹೋದ ನಂತರ ಅವರ ಬ್ಯಾಂಕ್ ಖಾತೆಗೆ ನಿವೃತ್ತಿ ವೇತನ ಬಂದಿತ್ತು ಎಂದರೆ ಸರಿ. ಸದರಿ ಹಣ ಒಟ್ಟು ಕುಟುಂಬದ ಆಸ್ತಿ ಅದರಲ್ಲಿ ಕೂಡ ನನಗೆ ಭಾಗ ಇದೆ ಎಂದು ಹೇಳಿ ಬರೆಸಿಲ್ಲ. ಸದರಿ ಹಣವನ್ನು ಒಂದನೇ ಪ್ರತಿವಾದಿ 4 ಜನ ಸಹೋದರರ ನಡುವೆ ಸಮನಾಗಿ ಹಂಚಿಕೆ ಮಾಡಿದ್ದಾರೆ . ಆ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ. ನಾನು ನನ್ನ ಅಕ್ಕತಂಗಿಯರನ್ನು ಈ ದಾವೆಯಲ್ಲಿ ಸೆರಿಸಿಲ್ಲ ಮತ್ತು ನಿವೃತ್ತಿ ವೇತನ ಹಣವನ್ನು ದಾವೆ ಆಸ್ತಿಯಾಗಿ ತೋರಿಸಿಲ್ಲ ಕಾರಣ ಈ ದಾವೆ ಉರ್ಜೀತ ಅಲ್ಲ ಎಂದರೆ ಸರಿಯಲ್ಲ. ದಾವಾ ಐಟೆಮ ನಂಬರ 3, 2ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಲಾರಿ ಚಾಲಕನಾಗಿ ಬೇರೆ ಬೇರೆ ಊರುಗಳಿಗೆ ಹೋಗುತ್ತಿದ್ದ ಕಾರಣ ಖರೀದಿ ಪತ್ರ ವನ್ನು 1ನೇ ಪ್ರತಿವಾದಿ ಜೊತೆ ಜಂಟಿ ಯಾಗಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(1 ಮತ್ತು 4 ನೇ ಪ್ರತಿವಾದಿಯರು ಮತ್ತು ಅವರ ವಕೀಲರು ಗೈರು ಹಾಜರು ಇರುವ ಕಾರಣ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )**
**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**